ಕರ್ನಾಟಕ ಸರ್ಕಾರ
ಉಪತಹಶೀಲ್ದಾರರವರ ನ್ಯಾಯಾಲಯ
ಉಪತಹಶೀಲ್ದಾರವರ ನಾಡಕಛೇರಿ, ಹಂಪಸಾಗರ

---

ಸಂ/ಕಂ/ಪಹಣಿ/ವಿವಾದ/42/2015-16 ದಿ.12.4.16

---

ಉಪಸ್ಥಿತರು :- ಶ್ರೀ ಎ.ಚಂದ್ರನಾಯಕ, ಉಪತಹಶೀಲ್ದಾರರು
ನಾಡಕಛೇರಿ ಹಂಪಸಾಗರ

---

**ವಾದಿಗಳು**
**1) ಶ್ರೀಮಳಿಯಣ್ಣನವರ ಬನ್ನೆಪ್ಪ**
**ತಂದೆ ವೀರಸಂಗಪ್ಪ**
**2) ಶ್ರೀ ಮಳಿಯಣ್ಣನವರ ಮಲ್ಲಪ್ಪ**
**ತಂದೆ ಬನ್ನೆಪ್ಪ**
**ಗ್ರಾಮ : ಉತ್ತಂಗಿ**

**ಪ್ರತಿವಾದಿಗಳು**
**ಶ್ರೀ ಎಂ.ಕೊಟ್ರೇಶ**
**ತಂದೆ ಬನ್ನೆಪ್ಪ**
**ಗ್ರಾಮ : ಉತ್ತಂಗಿ**

---

**ವಿಷಯ :- ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಮೋರಗೇರಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ 507/3 ವಿಸ್ತೀರ್ಣ 5.90 ಎಕರೆ ಜಮೀನು ಪಾಲುವಿಭಾಗದ ಪ್ರಕಾರ ಹಕ್ಕು ಬದಲಾವಣೆ ವಿಷಯಕ್ಕೆ ಸಂಬಂಧಿಸಿರುವಂತೆ ತಕರಾರು - ವಿಚಾರಣೆ.**

---

**<u>ಪೀಠಿಕೆ :-</u>**

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಮೋರಿಗೇರಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 507/3 ವಿಸ್ತೀರ್ಣ 5-90 ರಲ್ಲಿ 00-90 ವಾದಿ ಒಂದು ಇವರಿಗೆ ಹಾಗೂ 5-00 ಎಕರೆ ವಾದಿ ಎರಡು ಇವರಿಗೆ ಪಾಲು ವಿಭಾಗದ ಪ್ರಕಾರ ಹಕ್ಕು ಬದಲಾವಣೆಗಾಗಿ ತಾಲೂಕು ಭೂಮಿ ಕೇಂದ್ರದಲ್ಲಿ ನಿಗದಿತ ಅರ್ಜಿಯೊಂದಿಗೆ ದಾಖಲು ಮಾಡಿರುತ್ತಾರೆ. ಈ ಪ್ರಕಾರ ಭೂಮಿ ಕೇಂದ್ರದಲ್ಲಿ ವಹಿವಾಟು ಸಂಖ್ಯೆ 99/2015/16 ಹಾಗೂ ಹಕ್ಕು ಬಲಾವಣೆ ಸಂಖ್ಯೆ ಹೆಚ್-34/2015-16 ರಂತೆ ವಹಿವಾಟು ನಡೆಯುತ್ತ ಹಕ್ಕು ಬದಲಾವಣೆಗೆ ಸಂಬಂಧಿಸಿದ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಮುಂದಿನ ಕ್ರಮಕ್ಕಾಗಿ ಕಂದಾಯ ನಿರೀಕ್ಷಕರು ಹಂಪಸಾಗರ ಹೋಬಳಿ ಇವರಿಗೆ ರವಾನಿಸಲಾಗಿ ಇವರ ದ್ವಾರ ಗ್ರಾಮ ಲೆಕ್ಕಾಧಿಕಾರಿ ಮೋರಗೇರಿ ಇವರಿಂದ ಹಕ್ಕು ಬದಲಾವಣೆ ಸಂಬಂಧಿಸಿದ ನಮೂನೆ 12 ಹಾಗೂ ನೋಟೀಸು ನಮೂನೆ 21 ನ್ನು ಜಾರಿ ಮಾಡಿರುತ್ತಾರೆ. ನೋಟೀಸನ್ನು ಜಾರಿ ಮಾಡಲಾಗಿ ಪ್ರತಿವಾದಿಯು ತಮ್ಮ ಲಿಖಿತ ತಕರಾರನ್ನು ಭೂಮಿಕೇಂದ್ರದಲ್ಲಿ ಸ್ವೀಕೃತಿ ಸಂಖ್ಯೆ 2837/2015-16 ರಂತೆ ತಕರಾರು ದಾಖಲಾಗಿರುತ್ತದೆ. ಪ್ರಕರಣಕ್ಕೆ ತಕರಾರು ದಾಖಲಾದ ಹಿನ್ನೆಲೆಯಲ್ಲಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರು ಈ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸುತ್ತಾ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ

ಸಲ್ಲಿಸಿರುತ್ತಾರೆ. ಪ್ರಕರಣವನ್ನು ಈ ಮೇಲಿನ ಸಂಖ್ಯೆಯಂತೆ ದಾಖಲಿಸಿಕೊಂಡು ದಿನಾಂಕ: 22-01-2016 ರಿಂದ ದಿನಾಂಕ: 12-04-2016 ರವರೆಗೆ ವಿಚಾರಣೆ ನಡೆಸಲಾಯಿತು.

ವಿಚಾರಣೆ ನಡೆಸಲಾಗಿ ವಾದಿಗಳು ಹಾಜರಾಗಿದ್ದು ಪ್ರತಿವಾದಿಯು ಸಂಪೂರ್ಣ ವಾಯಿದಗಳಿಗೆ ಹಾಜರಾಗಿರುವುದಿಲ್ಲ. ಹಾಗೂ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ವಿವಾದಾತ್ಮಕ ಆಸ್ತಿಯು ದಿನಾಂಕ: 21-02-2013 ರಂದು ವಾದಿ ಪ್ರತಿವಾದಿಗಳು ತಂದೆ ಮಕ್ಕಳಿದ್ದು ವಿಭಾಗ ಹೊಂದಿರುತ್ತಾರೆ. ವಿಭಾಗ ದಸ್ತಾವೇಜು ಹಾಜರು ಪಡಿಸಿರುತ್ತಾರೆ. ಆ ತರುವಾಯ ಪ್ರತಿವಾದಿಯು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಖಟ್ಲೆ ಸಂಖ್ಯೆ ಓ.ಎಸ್.ನಂ. 68/2014 ರಂತೆ ಪ್ರಕರಣ ದಾಖಲು ಮಾಡಿರುತ್ತಾರೆ. ಈ ಪ್ರಕರಣವು ಮಾನ್ಯ ಸಿವಿಲ್ ನ್ಯಾಯಾಲಯ ಹಡಗಲಿ ಇವರಿಂದ ವಜಾಗೊಂಡಿರುತ್ತದೆ. (Dismissed) ಆದಾಗ್ಯೂ ಪ್ರತಿವಾದಿಗಳು ಸದರಿ ಪ್ರಕರಣಕ್ಕೆ ತಕರಾರು ಸಲ್ಲಿಸಿದ್ದು ತಕರಾರು ಹುರುಳಿಲ್ಲದ ಹಾಗೂ ದುರುದ್ದೇಶದಿಂದ ಕೂಡಿರುವುದು ಕಂಡು ಬರುತ್ತದೆ. ಹಾಗೂ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ಸಿವಿಲ್ ನ್ಯಾಯಾಲಯ ಹಡಗಲಿ ಇವರಲ್ಲಿ ವಜಾಗೊಂಡಿರುವ ಪ್ರಯುಕ್ತ ಪ್ರಕರಣವನ್ನು ಮುಕ್ತಾಯಗೊಳಿಸುತ್ತಾ ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ ಮೋರಿಗೇರಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 507/3 ಪೈಕಿ ವಿಸ್ತೀರ್ಣ 00-90 ಎಕರೆ ಮಳಿಯಣ್ಣನವರ ಬನ್ನೆಪ್ಪ ತಂದೆ ದಿ॥ ವೀರಸಂಗಪ್ಪ ಇವರಿಗೆ ಹಾಗೂ ಸ.ನಂ. 507/3 ಪೈಕಿ ವಿಸ್ತೀರ್ಣ 5-00 ಎಕರೆ ಶ್ರೀ ಮಳಿಯಣ್ಣನವರ ಮಲ್ಲಪ್ಪ ತಂದೆ ಬನ್ನೆಪ್ಪ ಇವರ ಹೆಸರಿನಲ್ಲಿ ವಿಭಾಗದ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ. ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ : ...12-4-16... ರಂದು ಘೋಷಿಸಲಾಗಿದೆ.

ಉಪತಹಶೀಲ್ದಾರರು
ನಾಡಕಛೇರಿ, ಹಂಪಸಾಗರ

ಪ್ರತಿಗಳು :

1) ವಾದಿ + ಪ್ರತಿವಾದಿಗಳು
2) ಭೂಮಿ ಕೇಂದ್ರಕ್ಕೆ
3) ಹೆಚ್ಚುವರಿ ಪ್ರತಿ ಕಡತಕ್ಕೆ